


## ಪುಷ್‌ಬುಲೆಟ್

ಫೈಲ್, ಲಿಂಕ್, ನೋಟ್ಸ್, ಲಿಸ್ಟ್ ಮತ್ತು ಅಡ್ರೆಸ್‌ಗಳನ್ನು ಡೆಸ್ಕ್‌ಟಾಪ್‌ನಿಂದ ಮೊಬೈಲ್ ಡಿವೈಸ್‌ಗೆ ಪಡೆಯಲು ಈ ಅಪ್ಲಿಕೇಶನ್‌ನಿಂದ ಸುಲಭ. ಕಂಪ್ಯೂಟರ್‌ನಲ್ಲಿ ಇದನ್ನು ಅಳವಡಿಸಿಕೊಂಡ ನಂತರ ಪುಷ್ ಬುಲೆಟ್ ವೆಬ್‌ಸೈಟ್‌ಗೆ ಲಾಗಾನ್ ಆಗಿ. ಅದರ ಮೂಲಕ ಮೊಬೈಲ್‌ಗೆ ಪುಷ್ ಮಾಡಿ. ಅದು ನಿಮ್ಮ ಆ್ಯಂಡ್ರಾಯ್ಡ್ ನೋಟಿಫಿಕೇಶನ್ ಬಾರ್ ಮೇಲೆ ಕಾಣಿಸಿಕೊಳ್ಳುತ್ತದೆ. ನಂತರ ನೀವು ಬೆರಳಿನಿಂದ ಕುಟ್ಟುವುದರ ಮೂಲಕ ಬಳಸಬಹುದು. ಒಂದಕ್ಕಿಂತ ಹೆಚ್ಚು ಮೊಬೈಲ್‌ಗಳಿಗೂ ಈ ಅಪ್ಲಿಕೇಶನ್ ಮೂಲಕ ಪುಷ್ ಮಾಡಬಹುದು. ಇದು ಸಂಪೂರ್ಣ ಉಚಿತ.




## ಪ್ರಿವ್ಯೂ ಆಲ್ಫಾ


ಪಾರದರ್ಶನ ಚಿತ್ರಗಳನ್ನು ನಿರ್ವಹಣೆ ಮಾಡಲು ಆ್ಯಪಲ್‌ನ ಪ್ರಿವ್ಯೂ ಅಪ್ಲಿಕೇಶನ್ ಬಳಸಬಹುದು. ಬೇರೆ ಬೇರೆ ಹಿನ್ನೆಲೆಯ ಸ್ಕ್ರೀನ್ ಮೇಲೆ ಪಾರದರ್ಶಕ ಚಿತ್ರಗಳನ್ನು ಬಳಸುವುದು ಸುಲಭ. ವಿವಿಧ ಬಣ್ಣಗಳ ಹಿನ್ನೆಲೆ ಇರುವಾಗ ಈ ಚಿತ್ರಗಳು ಚೆನ್ನಾಗಿ ಕಾಣುತ್ತವೆ. ಆದರೆ ಬಿಳಿಯ ಡಾಕ್ಯುಮೆಂಟ್ ಮೇಲೆ ಈ ಪಾರದರ್ಶಕ ಚಿತ್ರಗಳು ಕಾಣಲಾರವು. ಇದನ್ನು ಪ್ರಿವ್ಯೂ ಮೂಲಕ ಸರಿಪಡಿಸಲು ಸಾಧ್ಯ. ಹಾಗೆಯೇ ಪಾರದರ್ಶಕ ಹಿನ್ನೆಲೆ ಇಲ್ಲದ ಚಿತ್ರಗಳಿಗೂ ಪಾರದರ್ಶಕತೆ ಒದಗಿಸಬಹುದು.



ಪ್ರಿವ್ಯೂನಲ್ಲಿರುವ ಆಲ್ಫಾ ಟೂಲ್‌ನಿಂದ ಚಿತ್ರವಿರುವಷ್ಟೇ ಜಾಗವನ್ನು ಗುಲಾಬಿ ಬಣ್ಣದಿಂದ ಗುರುತು ಮಾಡಿ. ಇದು ವಿವಿಧ ಬಣ್ಣಗಳ ಹಿನ್ನೆಲೆಯಲ್ಲಿ ಅದ್ಭುತವಾಗಿ ಕಾಣುತ್ತದೆ. ಪಾರದರ್ಶಕವಾಗಿಲ್ಲದ ಚಿತ್ರಗಳನ್ನು ಈ ಟೂಲ್‌ನಿಂದ ಗುರುತು ಮಾಡಿ. ಆಯತಾಕಾರ, ಅಂಡಾಕಾರ.. ಹೇಗೆ ಬೇಕಾದರೂ ಆಯ್ಕೆ ನಿಮಗೆ ಬಿಟ್ಟಿದ್ದು. ನಂತರ ಗುರುತು ಮಾಡಿದ ಜಾಗವನ್ನು ಡಿಲೀಟ್ ಕೀ ಮೂಲಕ ತೆಗೆದು ಹಾಕಿದರೆ ಚಿತ್ರ ಪಾರದರ್ಶಕವಾಗಿ ಕಾಣುತ್ತದೆ. ಒಂದು ಚಿತ್ರವನ್ನು ಇನ್ನೊಂದರ ಮೇಲೆ ಸೂಪರ್‌ಇಂಪೋಸ್ ಮಾಡುವುದಿದ್ದರೂ ಇದೇ ಟೂಲ್ ಬಳಸಬಹುದು. ಅಂದರೆ ಚಿತ್ರದ ಹಿನ್ನೆಲೆಯನ್ನು ಪಾರದರ್ಶಕವನ್ನಾಗಿ ಮಾಡಿಕೊಂಡು ಇನ್ನೊಂದು ಚಿತ್ರವನ್ನು ಅದರ ಮೇಲೆ ಸೂಪರ್ ಇಂಪೋಸ್ ಮಾಡಬಹುದು.

## ಸೋಶಿಯಲ್ ಫಿಕ್ಸರ್

ಫೇಸ್‌ಬುಕ್ ಪ್ರೊಫೈಲ್ ಒಂದೇ ತರಹವಿದ್ದು ಏಕತಾನತೆಯಿಂದ ಕೂಡಿದೆ. ಕವರ್ ಫೋಟೊ ಬದಲಾಯಿಸುವುದು, ಟೈಮ್‌ಲೈನ್‌ನಲ್ಲಿ ಬದಲಾವಣೆ ಮಾಡುವುದು, ನಿಮ್ಮ ಬರಹವನ್ನು ಸೇರಿಸುವುದು... ಹೀಗೆ. ಈಗ ಸೋಶಿಯಲ್ ಫಿಕ್ಸರ್ ಬ್ರೌಸರ್‌ನಿಂದ ಫೇಸ್‌ಬುಕ್ ಖಾತೆಗೆ ಸುದ್ದಿಯನ್ನು ಒದಗಿಸುವ ಟ್ಯಾಬ್‌ಗೆ ಲಿಂಕ್ ಕೊಡಬಹುದು. ಚ್ಯಾಟ್ ಲಿಸ್ಟ್‌ಅನ್ನು ಎಲ್ಲಾ ಸ್ನೇಹಿತರಿಗೆ ತೋರಿಸಬಹುದು. ಸ್ನೇಹಿತರ ಪೋಸ್ಟ್ ನೋಡಬೇಕಾದರೆ ಥಂಬ್ ನೈಲ್ ಗಾತ್ರದ ಫೋಟೊ ಬದಲು ಪೂರ್ಣ ಪ್ರಮಾಣದ ಫೋಟೊ ನೋಡಬಹುದು.




ಇದರಲ್ಲಿರುವ ಫಿಲ್ಟರ್ ಮೂಲಕ ಮುಚ್ಚಿಟ್ಟ ಪೋಸ್ಟ್‌ಗಳನ್ನು ಬೇರೆ ಮಾಡಿಟ್ಟು ನೋಡಬಹುದು. ಅಂದರೆ ನಿಮ್ಮ ಸ್ನೇಹಿತರ ಕುರಿತ ಸುದ್ದಿಯನ್ನು ಓದಬಹುದು. ಅವರ ಕುಟುಂಬದ ಸುದ್ದಿ ಬೇಡವಾಗಿದ್ದರೆ, 'ಫ್ಯಾಮಿಲಿ' ಎಂದು ಶಬ್ದ ಟೈಪ್ ಮಾಡಿ ಬ್ಲಾಕ್ ಮಾಡಬಹುದು.




## ಅಂತರ್‌ಜಾಲ ಬಳಕೆ ಮೇಲೆ ನಿಗಾ

ಸ್ಮಾರ್ಟ್‌ಫೋನ್ ಮತ್ತು ಟ್ಯಾಬ್ಲೆಟ್ ಬಳಕೆದಾರರಲ್ಲಿ ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದ್ದು, ಅವರ ಅಂತರ್‌ಜಾಲ ಬಳಕೆಯ ಮೇಲೆ ಪೋಷಕರು ನಿಗಾ ಇಡುವುದು ಕಷ್ಟವಾಗುತ್ತಿದೆ. ಮಕ್ಕಳ ಅಂತರ್‌ಜಾಲ ಬಳಕೆ ಮೇಲೆ ನಿಗಾ ಇಡಲು ಮತ್ತು ನಿಯಂತ್ರಿಸಲು ಕೈಟ್‌ಫೋನ್ ಮತ್ತು ಕೈಟ್‌ಟೈಮ್ ನಂತಹ ಅಪ್ಲಿಕೇಶನ್‌ಗಳು ನೆರವು ನೀಡಬಲ್ಲವು. ಆಕ್ಷೇಪಾರ್ಹ ವೆಬ್‌ಸೈಟ್‌ಗಳನ್ನು ಈ ಅಪ್ಲಿಕೇಶನ್‌ಗಳ ಮೂಲಕ ಬ್ಲಾಕ್ ಮಾಡಬಹುದು. ಫೇಸ್‌ಬುಕ್, ಟ್ವಿಟ್ಟರ್‌ನಲ್ಲಿ ಮಕ್ಕಳಿಗೆ ಸೈಬರ್ ಕಿರುಕುಳ, ಲೈಂಗಿಕ ಕಿರುಕುಳ ನೀಡುವವರ ಮೇಲೂ ಇದರ ಮೂಲಕ ನಿಗಾ ಇಡಬಹುದು. ಜೊತೆಗೆ ಮಕ್ಕಳಿಗೆ ಸೂಕ್ತವಾದ ಶೈಕ್ಷಣಿಕ, ಗೇಮ್, ಪುಸ್ತಕಗಳಂತಹ ವಿಷಯವನ್ನು ಮಾತ್ರ ಅಂತರ್‌ಜಾಲದಲ್ಲಿ ನೀಡಬಹುದು. ಈ ಅಪ್ಲಿಕೇಶನ್‌ಗಳು ಆ್ಯಂಡ್ರಾಯ್ಡ್, ಐಪಾಡ್‌ನಲ್ಲಿ ಲಭ್ಯವಿದ್ದು, ಶುಲ್ಕ ನೀಡಬೇಕಾಗುತ್ತದೆ.

■ ಎಸ್. ತುಂಬೆ